ಬರೆದಿದ್ದೇನೆ. ಆದರೆ ಏನೂ ಕ್ರಮವನ್ನು ಕೈಗೊಂಡಿಲ್ಲ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ತಮ್ಮ ಮೂಲಕ ಗೃಹ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್: ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತೆ ವಿಚಾರ ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ. ಇದರ ಬಗ್ಗೆ ಕ್ರಮ ಜರುಗಿಸಲಾಗಿದೆ. ತಮ್ಮಿಂದ ಮತ್ತೇನಾದರೂ ಸಲಹೆ ಬೇಕಾದಲ್ಲಿ ತಮಗೆ ಫೋಸ್ ಮಾಡಿ ಮಾತನಾಡುತ್ತೇನೆ.

6) ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿಯ ಸಕ್ರಮ ಹಾಗೂ ಸಾಲ ವಸೂಲಾತಿಯ ತಡೆ.

ಶ್ರೀ ಮಲ್ಲಿಕಾರ್ಜುನ ಬಿಸಪ್ಪ ದಿವಟರ್: ಆಗಲೇ ಕಂದಾಯ ಸಚಿವರು ಇರಲಿಲ್ಲ. ನಾನು ಪ್ರಸ್ತಾಪ ಮಾಡಿದ ವಿಚಾರಕ್ಕೆ ಅವರ ಹೇಳಿಕೆಯನ್ನು ಕೊಡಿಸುವಿರ?

ಅಧ್ಯಕ್ಷರು: ಈಗ ಅವರು ಹೇಳುತ್ತಾರೆ. ಗಂಗಾಧರ ಗೌಡರ ವಿಚಾರಕ್ಕೆ ಉತ್ತರ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿ): ನಿನ್ನೆಯ ದಿನ ಇದನ್ನು ಸದಸ್ಯರಾದ ಗಂಗಾಧರಗೌಡರು ಕೂಡ ಪ್ರಸ್ತಾಪ ಮಾಡಿದ್ದಾರೆ. ನಾನು ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇವತ್ತು ಮುಖ್ಯ ಮಂತ್ರಿಗಳು ಸ್ಪಷ್ಟವಾದ ಸ್ಟೇಟ್‌ಮೆಂಟನ್ನು ಇದರ ಬಗ್ಗೆ ಕೊಡುತ್ತಿದ್ದಾರೆ. ರೈತರುಗಳ ಸಮಸ್ಯೆ ಏನಿದೆ ಅದರ ಬಗ್ಗೆ ಮತ್ತು ಗೇಣಿದಾರರ ರಿಕವರಿ ಬಗ್ಗೆ ಅವರು ಹೇಳುತ್ತಾರೆ. ನಿನ್ನೆ ಅವರು ಪ್ರಸ್ತಾಪ ಮಾಡಿದಾಗ ನಾನು ಹೇಳಿದೆ, ಎಲ್ಲಿ ಜಬರ್‌ದಸ್ತಾಗಿ ವಸೂಲು ಮಾಡುತ್ತಿದ್ದಾರೆ ಅಲ್ಲಿ ತೊಂದರೆ ಕೊಡಬಾರದೆಂದು ಒಂದು ಸುತ್ತೋಲೆಯನ್ನು ಸಹ ಕಳುಹಿಸಿದ್ದೇವೆ. ಆದರೂ ಕೂಡ, ಇದನ್ನು ಇನ್ನೆಲ್ಲಿ ಮಾಡಬಹುದು ಎನ್ನುವ ಬಗ್ಗೆ ನನ್ನ ಗಮನಕ್ಕೆ ತಂದರೆ, ತಕ್ಷಣ ಡೆಪ್ಯೂಟಿ ಕಮೀಷನರ್‌ಗೆ ಇದರ ಬಗ್ಗೆ ಬರೆದು ಮಾಹಿತಿಯನ್ನು ತರಿಸಿಕೊಂಡು ಸಂಬಂಧಪಟ್ಟವರಿಗೆ ಪತ್ರ ಬರೆಯುತ್ತೇನೆ. ಇದರ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ನಿನ್ನೆಯ ದಿನ ಸಾಯಂಕಾಲ ಹೇಳಿದ್ದೇನೆ. ಅವರು ಈ ಎಲ್ಲಾ ಸಮಸ್ಯೆಗಳ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕೃಷಿಯೇತರ ಆದಾಯ 12,000 ರೂಪಾಯಿ ಇದ್ದುದನ್ನು 50,000 ರೂಪಾಯಿಗಳಿಗೆ ಏರಿಸಿದೆ. ಇದರಿಂದಾಗಿ ಈಗಾಗಲೇ ನಡೆದಿರತಕ್ಕಂಥ ವ್ಯವಹಾರಗಳ ಬಗ್ಗೆ ನೋಟೀಸ್ ಕೊಡುತ್ತಿದ್ದಾರೆ. ಅಂಥ ಖರೀದಿ ಪತ್ರಗಳನ್ನು ರಿಜಿಕ್ಟ್ ಮಾಡುತ್ತಿದ್ದಾರೆ. ಖರೀದಿ ಪತ್ರ ದಾಖಲೆ ಮಾಡುತ್ತಿಲ್ಲ. ಅದಕ್ಕಾಗಿ ಪೆಂಡಿಂಗ್ ಕೇಸ್ ಬಗ್ಗೆ ಮಾನ್ಯ ಸಚಿವರು ಇವರಿಗೆ ಸೂಕ್ತ ಆದೇಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಇದು ನೀವು ಸೆಕೆಂಡ್ ರೌಂಡ್ ಮಾತನಾಡುತ್ತಿರುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್: ಹಾಗೇನಿಲ್ಲ, ಉತ್ತರ ಸಿಕ್ಕಲಿಲ್ಲ. ಅದಕ್ಕೆ ಕೇಳುತ್ತಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ನಿನ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿರುವಂಥ ವಿಚಾರವನ್ನು ನಮ್ಮ ಕಂದಾಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಬಗರ್‌ಹುಕುಂ 1968ನೇ ಇಸವಿಯಿಂದ ಮಾಡಿರುವ ದಾಖಲೆಗಳು ಇವೆ. ಇಲ್ಲಿ ಕಾನೂನು ಮಾಡುವುದರ ಮೂಲಕ ಇದು ಸಕ್ರಮಗೊಳ್ಳುತ್ತದೆ ಎಂದು ಹೇಳುತ್ತೀರಿ. ಆದರೆ ಅಲ್ಲಿ ಅಧಿಕಾರಿಗಳು ಗೇರು ಫಸಲನ್ನು ಹರಾಜು ಮಾಡಿದ್ದಾರೆ. ಈ ತರಹ ನಡೆದರೆ, ದೂರು ತಂದು ಹೇಳುವ ಕೆಲಸವನ್ನು ನಮಗೆ ಕೊಡುತ್ತಿದ್ದೀರಿ. ಇದು ಆಗದ ಹಾಗೆ ಒಂದು ಸುತ್ತೋಲೆಯನ್ನು ತಾವು ಕಳುಹಿಸಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಗಂಗಾಧರಗೌಡ: ವಿಧಾನಸೌಧದಿಂದ ಒಂದು ಸುತ್ತೋಲೆ ಏಕೆ ಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ಇದನ್ನು ನಿಯಮ 334ರಲ್ಲಿ ಕೇಳಿದ್ದೆ.

ಸ್ಪಷ್ಟವಾದ ಉತ್ತರ ಕೊಡುತ್ತಿಲ್ಲ. ಈಗ ಕಂದಾಯ ಮಂತ್ರಿಗಳು ನಿರ್ದಿಷ್ಟವಾದ ಉದಾಹರಣೆ ಕೊಡಿ ಎಂದು ಕೇಳುತ್ತಿದ್ದಾರೆ. ಎಲ್.ಡಿ. ಬ್ಯಾಂಕ್‌ನವರು 31ನೇ ಮಾರ್ಚಿಯೊಳಗೆ ಸಾಲದ ಕಂತನ್ನು ಕಟ್ಟದೇ ಇದ್ದರೆ ಹರಾಜು ಮಾಡುತ್ತೇವೆಂದು ನೋಟೀಸು ಕೊಡುತ್ತಿದ್ದಾರೆ. ಇನ್ನು ನಂಜುಂಡಸ್ವಾಮಿಯವರು ಹೇಳಿದ ರೀತಿ 50ರಿಂದ 500 ರೂಪಾಯಿಯವರೆಗೆ ದಂಡ ಫೀ ಹಾಕಿಬಿಟ್ಟು ಸಾಲ ವಸೂಲು ಮಾಡುತ್ತಿದ್ದಾರೆ. ಅವರ ಬೆಳೆಗಳನ್ನು ಹರಾಜು ಮಾಡುತ್ತಿದ್ದಾರೆ. ನಾವು ವಿಧಾನಸೌಧದಲ್ಲಿ ಕುಳಿತುಕೊಂಡು ತೀರ್ಮಾನ ಮಾಡಿದಂಥ ಕಾನೂನು ತಾಲ್ಲೂಕು ಮಟ್ಟಕ್ಕೆ ಮುಟ್ಟಿಸಲಿಕ್ಕೆ ಡಿಲೇ ಆಗುತ್ತದೆಂದರೆ ಇದು ಬಹಳ ಬೇಸರವಾದಂಥ ವಿಚಾರವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ನಮಗೆ ಗೊತ್ತಿದೆ. ಎನ್ಫೋರ್ಸ್‌ಮೆಂಟ್ ರೆಗ್ಯುಲರೈಸೇಷನ್ ಮಾಡತಕ್ಕ ಬಗ್ಗೆ ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ, ಸೆಕ್ಷನ್ 94 ಮೊನ್ನೆ ಅಮೆಂಡ್‌ಮೆಂಟ್ ಆಗಿದೆ. ಅದು ಮೇಲ್ಮನೆಯಲ್ಲಿ ಆದಮೇಲೆ ಅದು ಗೌರ್ನರ್‌ಗೆ ಹೋಗಿ ಅಪ್ರೂವ್ ಆಗಿ ಬಂದಮೇಲೆ ರೂಲ್ಸ್ ಆಗಬೇಕು. ರೂಲ್ಸ್ ಆಗಬೇಕಾದರೆ, ಮಿನಿಮಮ್ 30 ದಿವಸಗಳು ಬೇಕು ಅದು ಅಬ್‌ಜಕ್ಷನ್ ಕಾಲ್ಪರ್ ಮಾಡಿ ನೋಟಿಫಿಕೇಷನ್ ಆದಮೇಲೆ ಅದು ಜಾರಿಯಲ್ಲಿ ಬರುತ್ತದೆ. ಅದು ಎಲ್ಲಾ ಸದಸ್ಯರಿಗೂ ಗೊತ್ತಿದೆ. ಅದು ಮೊನ್ನೆ ತಾನೆ ಟೈಮ್ ಮುಗಿದಿದೆ. ಅದರ ಆಧಾರದ ಮೇಲೆ ಈಗಾಗಲೇ ಇದನ್ನು ಸಕ್ರಮಗೊಳಿಸಬೇಕು ಎನ್ನತಕ್ಕದ್ದು ಎಂದು ಈ ಸದನದ ಮುಖಾಂತರ ಕೂಡ ಹೇಳಿದ್ದೇವೆ. ಮೇಲ್ಮನೆಯ ಸದನದ ಮುಖಾಂತರ ಕೂಡ ಹೇಳುತ್ತಿದ್ದೇವೆ. ಇದನ್ನು ರೆಗ್ಯುಲರೈಸ್ ಮಾಡುತ್ತಿದ್ದೇವೆ. ಅದಕ್ಕಾಗಿ ತಹಶೀಲ್ದಾರ್‌ಗಳಿಗೆ, ಮೆಂಬರ್ ಸೆಕ್ರೆಟರಿ ಎಂದು ಹೇಳಿ ಮಾಡಬೇಕು ಎನ್ನತಕ್ಕದ್ದರ ಬಗ್ಗೆ ನಿನ್ನೆಯ ದಿವಸವೇ ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ಇದು ತಿಂಗಳುಗಟ್ಟಲೆ ಲೇಟ್ ಆಗಿಲ್ಲ. ಮೊನ್ನೆ ಕಾನೂನು ಆಗಿ ತಿಂಗಳು ಆಯಿತು. ಆದ್ದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ. ಆದಷ್ಟು ಎರಾಸ್ಮೆಂಟ್ ಮಾಡಬೇಡಿ ಎನ್ನತಕ್ಕ ಸ್ಪಷ್ಟವಾದಂಥ ಆದೇಶವನ್ನು ಇಡೀ ಸ್ಟೇಟ್‌ನಲ್ಲಿ ಕೊಡುತ್ತೇವೆ. ಏಕೆಂದರೆ, ಕೆಲವೊಂದು ಕಡೆ ತೊಂದರೆ ಕೊಡುತ್ತಿದ್ದಾರೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಮಾನ್ಯ ನಂಜುಂಡ ಸ್ವಾಮಿಯವರು ನನ್ನ ಗಮನಕ್ಕೆ ತಂದಿದ್ದಾರೆ. ಆದ್ದರಿಂದ, ಈ ಬಗ್ಗೆ ನಾನು ಸೌತ್ ಕೆನರಾ ಡೆಪ್ಯುಟಿ ಕಮೀಷನರ್‌ರವರಿಗೆ ಸ್ಪಷ್ಟವಾದ ನಿರ್ದೇಶನ ಕೊಡುತ್ತೇನೆ.

ಶ್ರೀ ಯು.ಕೆ. ಶಾಮಣ್ಣ: ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಶೃಂಗೇರಿಯಲ್ಲಿ ಸಾಲ ವಸೂಲಿ ಬಾಕಿ ಬಗ್ಗೆ ಮಾರ್ಚ್ 31ನೇ ತಾರೀಖಿನವರೆಗೆ ಸ್ವಲ್ಪ ತಡೆಹಿಡಿದಿದ್ದೇವೆ. 10 ಸಾವಿರ ರೂಪಾಯಿ ಒಳಗಡೆ ಸಾಲ ಇದ್ದಂಥ ರೈತ ಕುಟುಂಬದವರಿಗೆ ಎಂದು ಹೇಳಿದಂಥ ಆದೇಶವನ್ನು ಹೇಳಿದ್ದರು.

ಅಧ್ಯಕ್ಷರು: ಅದರ ಬಗ್ಗೆ ಒಂದು ಕಾಂಪ್ರಹೆನ್ಸೀವ್ ಸ್ಟೇಟ್‌ಮೆಂಟ್ ಮುಖ್ಯಮಂತ್ರಿಗಳು ಮಾಡುತ್ತಾರೆ.

ಶ್ರೀ ಯು.ಕೆ. ಶಾಮಣ್ಣ: ಅಧ್ಯಕ್ಷರೆ, ಅದಕ್ಕಾಗಿಯೇ ನಿನ್ನೆ ಹರಾಜು ಇಸ್ತಿಹಾರ್ ಏನು ಕೊಟ್ಟಿದ್ದಾರೆ ಅದನ್ನು ನಾನು ಮುಖ್ಯಮಂತ್ರಿಗಳ ಕೈಯಲ್ಲಿ ಕೊಟ್ಟಿದ್ದೇನೆ. ಈಗ ಎರಡು ಮೂರು ಸಾವಿರ ರೂಪಾಯಿ ಸಾಲ ಇರುವವರದ್ದು ಹರಾಜು ಮಾಡುತ್ತಿದ್ದಾರೆ. ಅವರ ಗೋಡೆಯ ಮೇಲಿರುವಂಥ ಗಡಿಯಾರವನ್ನು ಸಹ ತೆಗೆದುಕೊಂಡು ಬಂದು ಹರಾಜು ಮಾಡುವಂಥ ಪರಿಸ್ಥಿತಿಗೆ ತಂದಿದ್ದಾರೆ. ಇದು ಸರಿಯೇ. ಮತ್ತೊಂದು ವಿಷಯ ಅಂದರೆ, ನಾನು ಈ ಸದನದ ಅವಧಿಯಲ್ಲಿ ನಾನು ಸುಮಾರು 25-26 ಪ್ರಶ್ನೆಗಳನ್ನು ಹಿಂದೆ ಕಳುಹಿಸಿಕೊಟ್ಟಿದ್ದೆ. ಆದರೆ, ನನ್ನದು ನಿಯಮ 334 ಮಾತ್ರ ಒಂದು ಬಂದಿದೆ. ಇನ್ನು ಉಳಿದದ್ದು ಏತಕ್ಕೆ ಬರಲಿಲ್ಲವೋ ನನಗೆ ಗೊತ್ತಿಲ್ಲ. ನಾನು ಹಿಂದೆ ಅಡಿಕೆ ಬಗ್ಗೆ ಒಂದು ಪ್ರಶ್ನೆಯನ್ನು ಕಳಿಹಿಸಿಕೊಟ್ಟಿದ್ದೆ. ಈಗ ಅಡಿಕೆ ಬೆಳೆಗೆ

ಹಳದಿ ರೋಗ ಬಂದು ಬಹಳಷ್ಟು ಮಲೆನಾಡು ಪ್ರದೇಶದ ಬಾಗಾಯ್ತು ಜಮೀನು ಹಾಳಾಗಿ ಹೋಗಿದೆ ಎನ್ನತಕ್ಕದ್ದರ ಬಗ್ಗೆ ಸರ್ಕಾರದ ವಿವರಣೆಯನ್ನು ಕೇಳಿದ್ದೆ. ಅದಕ್ಕೆ ಪರಿಹಾರ ರೂಪದ ಉತ್ತರವೂ ಕೂಡ ನನಗೆ ಇದುವರೆಗೂ ತಲುಪಿಲ್ಲ.

ಅಧ್ಯಕ್ಷರು: ಮಾನ್ಯ ಸದಸ್ಯರು ಅಡಿಕೆ ಬೆಳೆಗೆ ಹಳದಿ ರೋಗ ಬಂದಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ, ಮಾನ್ಯ ಕೃಷಿ ಮಂತ್ರಿಗಳು ಅದರ ಬಗ್ಗೆ ಏನಾದರೂ ಹೇಳುವುದು ಇದ್ದರೆ ತಿಳಿಸಬೇಕು.

7) **ಮಲೆನಾಡಿನಲ್ಲಿ ಅಡಿಕೆಬೆಳೆಗೆ ಹಳದಿ ರೋಗ ತಗುಲಿ, ಪರಿಹಾರಕ್ಕಾಗಿ ಒತ್ತಾಯ:**

ಶ್ರೀ ಯು.ಕೆ. ಶಾಮಣ್ಣ: ಅಧ್ಯಕ್ಷರೆ, ಸುಮಾರು 10-15 ವರ್ಷಗಳಿಂದ ಇದರ ಬಗ್ಗೆ ಸಂಶೋಧನೆ ನಡೆಯುತ್ತಿದೆ ಎಂದು ಹೇಳಿದ್ದಾರೆಯೇ ಹೊರತು ಆ ಒಂದು ಸಂಶೋಧನೆ ನಮ್ಮ ಮಲೆನಾಡು ಪ್ರದೇಶದಲ್ಲಿ ಇಲ್ಲ. ಮಲೆನಾಡಿನಲ್ಲಿ ಅಡಿಕೆ ಬೆಳೆಯುವಂಥದ್ದು ನಮ್ಮ ಮುಖ್ಯ ವ್ಯವಸಾಯದ ಕಸುಬು ಆಗಿರುವುದರಿಂದ ಅಲ್ಲಿ ಸಂಶೋಧನೆ ಕಾರ್ಯಕ್ರಮ ನಡೆದಿಲ್ಲ. ಅಲ್ಲಿರುವಂಥ ಜನತೆಗೆ ಗೊತ್ತಿರುವ ಹಾಗೆ ಎಲ್ಲಿಯೂ ಸಂಶೋಧನೆ ನಡೆದಿಲ್ಲ. ಬಹುಶಃ ತೀರ್ಥಹಳ್ಳಿಯಲ್ಲಿ ನಡೆಯುತ್ತಿದೆ. ಆದರೆ ಅಡಿಕೆ ಡಿಸೀಸ್ ಬಗ್ಗೆ ಯಾವ ಒಂದು ಪರಿಹಾರವನ್ನು ಕಂಡುಹಿಡಿದಿಲ್ಲ. ಅದರ ಬಗ್ಗೆ ನಾವು ಈ ರೀತಿ ಮಾಡಿದ್ದೇವೆಂದು ಹೇಳತಕ್ಕಂಥ ಒಂದು ಯೋಜನೆಯನ್ನು ಕೂಡ ಹಾಕಿಲ್ಲ. ಅದರ ಬಗ್ಗೆ ಸರ್ಕಾರದ ಪರವಾಗಿ ಉತ್ತರ ಬರಲಿಲ್ಲ. ದಯವಿಟ್ಟು ಸರ್ಕಾರ ಉತ್ತರ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಅಧ್ಯಕ್ಷರೆ, ಈ ಒಂದು ಸೂಚನೆಗೆ ಈಗಾಗಲೇ ಉತ್ತರವನ್ನು ತಮ್ಮ ಮೂಲಕ ಕಳುಹಿಸಿಕೊಟ್ಟಿದ್ದೇವೆ. ಈ ಹಳದಿ ರೋಗ ಬರುವಂಥ ಖಾಯಿಲೆ ಇವೊತ್ತಿನದಲ್ಲ. ಕಳೆದ 40 ವರ್ಷಗಳಿಂದಲೂ ಚಿಕ್ಕಮಂಗಳೂರು, ತೀರ್ಥಹಳ್ಳಿ ಭಾಗದಲ್ಲಿ ಆ ಖಾಯಿಲೆ ಇದೆ. ಇತ್ತೀಚಿನ ದಿನಗಳಲ್ಲಿ ಈ ಕಾಯಿಲೆ ಜಾಸ್ತಿಯಾಗಿದೆ. ಈ ಬಗ್ಗೆ ವಿಶ್ವವಿದ್ಯಾಲಯದವರು ಆಗಲಿ, ಸರ್ಕಾರದವರಾಗಲೀ, ಸಂಶೋಧನೆಯನ್ನು ಮಾಡಿದರೂ ಕೂಡ ಅದರಲ್ಲಿ ಯಾವುದೇ ಪ್ರಯೋಜನ ಆಗಿಲ್ಲ. ಆ ಒಂದು ಕಾಯಿಲೆ ಬರದಂತೆ ತಡೆಗಟ್ಟಲು ತಮಿಳುನಾಡು ಮತ್ತು ಕೇರಳಾ ಸರ್ಕಾರದವರು ಕೂಡ ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ಅವರಿಗೂ ಕೂಡ ಅದು ಸಾಧ್ಯವಾಗಿಲ್ಲ. ಈಗ ಅದರ ಬಗ್ಗೆ ಬದಲಿ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವೇ ಎನ್ನತಕ್ಕ ಬಗ್ಗೆ ವಿಶ್ವವಿದ್ಯಾಲಯ ಪ್ರಯತ್ನ ಮಾಡುತ್ತಿದೆ. ಆದರೆ ಅವರು ತಮ್ಮ ಅಸಹಾಯಕತೆಯನ್ನು ಹೇಳಿ, ಇದು ನಮಗೆ ಕಂಡುಹಿಡಿಯಲಿಕ್ಕೆ ಆಗುತ್ತಿಲ್ಲ ಎನ್ನತಕ್ಕ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಈಗಾಗಲೇ ಅವರ ಗಮನಕ್ಕೂ ಕೂಡ ತಂದಿದ್ದೇವೆ. ಸನ್ಮಾನ್ಯ ಸದಸ್ಯರಿಗೆ ಈ ವಿಷಯವನ್ನು ನಾನು ಮತ್ತೊಂದು ಸಾರಿ ತಿಳಿಸುತ್ತಿದ್ದೇವೆ.

ಅಧ್ಯಕ್ಷರು: ಶೃಂಗೇರಿ ಅಡಿಕೆ ಬಹಳ ಉತ್ಕೃಷ್ಟವಾದಂಥ ಅಡಿಕೆ. ತೀರ್ಥಹಳ್ಳಿ ಅಡಿಕೆಗಿಂತಲೂ ಉತ್ತಮವಾದಂಥ ಅಡಿಕೆ. ಆದ್ದರಿಂದ, ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಕಳಕಳಿ ವಹಿಸಬೇಕು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಮಂತ್ರಿಗಳು ನನ್ನ ಮತ್ತೊಂದು ವಿಷಯಕ್ಕೆ ಸ್ಪಷ್ಟೀಕರಣವನ್ನು ಕೂಡಬೇಕು. ಇಲ್ಲಿ ಮಾನ್ಯ ಕಾನೂನು ಮಂತ್ರಿಗಳೂ ಇದ್ದಾರೆ. ಆದುದರಿಂದ ಈ ಇಬ್ಬರು ಮಂತ್ರಿಗಳೂ ನನ್ನ ಪ್ರಶ್ನೆಗೆ ಉತ್ತರಕೊಡಬೇಕು. ಏಕೆಂದರೆ....

ಅಧ್ಯಕ್ಷರು: ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಯಾರ್ಯಾರನ್ನು ಸೇರಿಸಬೇಕು ಹೇಳಿ.